# ಜ್ಞಾನಶಕ್ತಿ
ಮಾಸ ಪತ್ರಿಕೆ
## JNANASHAKTHI





**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಜುಲೈ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 7 ಪ್ರಕಟಣೆ : 9–07–2022


## ಶ್ರೀ ಸುಬ್ರಮ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

## ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಶ್ರೀ ಕೆ. ಆರ್. ಉಪಾಧ್ಯಾಯರಿಂದ ಶ್ರೀ ಸುಬ್ರಮ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ ಮತ್ತು ಪುತ್ತೂರಿನ 'ಶಿವಸದನ'ಕ್ಕೆ ದೇಣಿಗೆ






ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಶ್ರೀ ಕೆ. ಆರ್. ಉಪಾಧ್ಯಾಯರವರು ತಮ್ಮ ಹಾಗೂ ಧರ್ಮಪತ್ನಿ ಶ್ರೀಮತಿ ಕಟೀಲು ಸುಶೀಲಾ ಉಪಾಧ್ಯಾಯ ಹೆಸರಿನಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ರೂ 10 ಲಕ್ಷ, ತಮ್ಮ ಮಾತಾಪಿತರಾದ ಶ್ರೀಮತಿ ಮತ್ತು ಶ್ರೀ ಕಟೀಲು ನಾರಾಯಣ ಉಪಾಧ್ಯಾಯ ಸ್ಮಾರಕ ರೂ. 50,000/-, ತಮ್ಮ ಅಜ್ಜ, ಅಜ್ಜಿಯರಾದ ಬ್ರಹ್ಮಶ್ರೀ ಕಟೀಲು ರಾಮಪ್ಪ ಉಪಾಧ್ಯಾಯ ಮತ್ತು ಶ್ರೀಮತಿ ಕಾವೇರಿಯಮ್ಮ ಸ್ಮಾರಕ ರೂ. 50,000/-ಗಳ ವಿದ್ಯಾರ್ಥಿ ವೇತನ ನಿಧಿಯನ್ನು ಸ್ಥಾಪಿಸಿದ್ದಾರೆ. ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- (ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಕಾರ್ಯಕ್ರಮದಲ್ಲಿ ಶ್ರೀ ಕೆ. ಆರ್. ಉಪಾಧ್ಯಾಯರ ಸೋದರಳಿಯ ಡಾ। ಅರವಿಂದ ರಾವ್, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ನಿರ್ದೇಶಕರುಗಳು, ಯುವ ವೇದಿಕೆ ಪದಾಧಿಕಾರಿಗಳು, ಮಹಿಳಾ ವೇದಿಕೆ ಪದಾಧಿಕಾರಿಗಳು, ಸದಸ್ಯರುಗಳು ಭಾಗವಹಿಸಿದರು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು

## ಜುಲೈ ತಿಂಗಳ 'ಜ್ಞಾನಶಕ್ತಿ' ಮಾಸಪತ್ರಿಕೆಯ ರವಾನೆ ಖರ್ಚುಗಳ ಪ್ರಾಯೋಜಕರು



ಶ್ರೀ ಪಂಜ ಮೋಹನದಾಸ ರಾವ್
✆ : 9980253661

ಜುಲೈ ತಿಂಗಳ 'ಜ್ಞಾನಶಕ್ತಿ' ಮಾಸಪತ್ರಿಕೆಯ ರವಾನೆ ಖರ್ಚುಗಳನ್ನು (ರೂ. 2,700/-) ಶ್ರೀ ಪಿ. ಮೋಹನದಾಸ್ ರಾವ್ (ಮೆನೇಜರ್ ಶ್ರೀ ಸುಬ್ರಹ್ಮಣ್ಯ ಸಭಾ) ಇವರು ತಮ್ಮ ಮಾತಾಪಿತರಾದ ಶ್ರೀ ಪಿ. ವೀರರಾಘವ ರಾವ್ ಮತ್ತು ಶ್ರೀಮತಿ ಲಕ್ಷ್ಮಿ ಅಮ್ಮನವರ ಸವಿನೆನಪಿಗಾಗಿ ಹಾಗೂ ತಮ್ಮ ಹುಟ್ಟುಹಬ್ಬದ (9-2-2022) ಪ್ರಯುಕ್ತ ಪ್ರಾಯೋಜಿಸಿದ್ದಾರೆ. ಅವರಿಗೆ ಜ್ಞಾನಶಕ್ತಿ ಶ್ರೀ ಸುಬ್ರಹ್ಮಣ್ಯ ದೇವರು ಉತ್ತಮ ಆರೋಗ್ಯ ಭಾಗ್ಯಗಳನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.

'ಜ್ಞಾನಶಕ್ತಿ' ಮಾಸಪತ್ರಿಕೆ ಬಳಗ



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ**

ದಿನಾಂಕ **24-07-2022**ನೇ ಆದಿತ್ಯವಾರದಂದು

## 'ಆಟಿತೊ ಆಟ ಕೂಟ'



ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.



ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಕಾರ್ಯಕ್ರಮಗಳು



| | |
|---|---|
| ಬೆಳಗ್ಗೆ 8-30ರಿಂದ : | ಉಪಾಹಾರ |
| ಬೆಳಗ್ಗೆ 9-00ರಿಂದ : | ಕಲ್ಲಾಟ (ಪೊಕ್ಕು), ಕೇರಂ ಪಂದ್ಯಾಟ<br>ಚೆನ್ನೆಮಣೆ ಪಂದ್ಯಾಟ ಆರಂಭ (ಮುಕ್ತ ವಿಭಾಗ) |
| ಬೆಳಗ್ಗೆ 11-00ರಿಂದ : | ತುಳುನಾಡಿನ ಹಳ್ಳಿ ಉಡುಗೆ ಸ್ಪರ್ಧೆ (ಮುಕ್ತ ವಿಭಾಗ) |
| ಮಧ್ಯಾಹ್ನ 1-00ರಿಂದ : | ಆಟಿಯ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನ |
| ಮಧ್ಯಾಹ್ನ 2-00ರಿಂದ : | ಪರ್ಯಾಯ ತೋಟಗಾರಿಕೆ<br>ಹಣ್ಣು – ಹಂಪಲುಗಳ ಕೃಷಿ ಬಗ್ಗೆ ಮಾಹಿತಿ<br>ಶ್ರೀ ಇನ್ನ ಚಂದ್ರಕಾಂತ್ ರಾವ್<br>ಯಶಸ್ವಿ ಪ್ರಗತಿಪರ ಕೃಷಿಕರು |
| ಮಧ್ಯಾಹ್ನ 2-30ರಿಂದ : | 'ಕರೋಕೆ' ರಸಮಂಜರಿ – ಸಮಾಜದ ಪ್ರತಿಭೆಗಳಿಂದ<br>(ಟ್ರಾಕ್‌ಗಳಿಗೆ ಮಾತ್ರ ಅವಕಾಶ) |
| ಸಂಜೆ 4-30ರಿಂದ : | ಬಹುಮಾನ ವಿತರಣೆ, ರಾಷ್ಟ್ರಗೀತೆ |

ವಿ. ಸೂ. : ಪಂದ್ಯಾಟದಲ್ಲಿ ಹಾಗೂ 'ಕರೋಕೆ' ರಸಮಂಜರಿಯಲ್ಲಿ ಭಾಗವಹಿಸುವವರು ದಯವಿಟ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.

**ಹೆಚ್ಚಿನ ಮಾಹಿತಿಗಾಗಿ :**

| | | | |
|---|---|---|---|
| ಶ್ರೀ ಅನಿಲ್ ಎನ್. | : 9448815172 | ಶ್ರೀಮತಿ ಕುಸುಮಾ ನವೀನ್ ಕುಮಾರ್ | : 9480760904 |
| ಶ್ರೀ ಸುರೇಶ್ ಕಡಬ | : 9972760673 | ಶ್ರೀಮತಿ ಪುಷ್ಪಾ ಶ್ರೀನಿವಾಸ್ | : 9739155359 |

- ಶಿಕ್ಷಣ ಎನ್ನುವುದು ಸಮೃದ್ಧಿಯಲ್ಲಿ ಆಭರಣ ಇದ್ದಂತೆ. ಪ್ರತಿಕೂಲ ಸಂದರ್ಭದಲ್ಲಿ ಆಶ್ರಯತಾಣದಂತೆ. – ಅರಿಸ್ಟಾಟಲ್
- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ. – ಸ್ವಾಮಿ ವಿವೇಕಾನಂದ

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
● ನಾಗರಾಜ್ ವರ್ಕಾಡಿ ● ರಘುವೀರ್ ಪೆರ್ಡೂರು
● ಟಿ. ಬಿ. ಮೋಹನ್ ರಾವ್ ● ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
● ಕರುಣ್ ರಾವ್ ಬೆಳ್ಳೆ ● ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
● ಚೇತನ್ ಶರ್ಮ
● ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

Whatsapp : 7795116598 ✆ : 9343361618
e-mail : jnanashakthisss@gmail.com



'ಶಿವಸದನ'ವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಈಗಾಗಲೇ 34ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ.

**ಆಸಕ್ತರಿಗೆ ಮಾಹಿತಿ ನೀಡಿ ಸಂಪರ್ಕಿಸಿರಿ :**

ಶ್ರೀ ಕರುಣ್ ರಾವ್ ಬೆಳ್ಳೆ ✆ : 7337634359
ಶ್ರೀ ಪಿ. ಶ್ರೀಕಾಂತ್ ರಾವ್ ✆ : 7795116598






## ಶ್ರೀ ಶೃಂಗೇರಿ ಶಂಕರಮಠ, ಉಡುಪಿ ಶಾಖಾ - ನಿವೇಶನ ಸಮಿತಿ, ಉಡುಪಿ

ಪ್ರಿಯ ಬಂಧುಗಳೆ,

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳು ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜದ ಬಗ್ಗೆ ಬಹಳ ವಾತ್ಸಲ್ಯ ಹೊಂದಿದವರು. ಹಾಗಾಗಿ ನಮ್ಮ ಬ್ರಾಹ್ಮಣ್ಯದ ಬಗ್ಗೆ ಹೆಚ್ಚಿನ ಇತರ ಬ್ರಾಹ್ಮಣರು ಸಂಶಯ ವ್ಯಕ್ತಪಡಿಸಿದಾಗ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ವಿಚಾರವಿಮರ್ಶೆ ನಡೆಸಿ ನಮ್ಮ ಯಥಾರ್ಥ ಸ್ಥಾನಮಾನಗಳನ್ನು ಗುರುತಿಸಿದವರು. ಅಷ್ಟೇ ಅಲ್ಲ **'ಶ್ರೀಮುಖ'**ವನ್ನು ನೀಡಿ ನಮ್ಮನ್ನು ವ್ಯತ್ಯಾಸವಾಗಿ ಕಾಣುವಂತಿಲ್ಲ ಎಂದು ಲೋಕಕ್ಕೇ ತಿಳಿಸಿದವರು. ಶ್ರೀ ಶ್ರೀಗಳವರು ನಮ್ಮ ಬೆಂಬಲಕ್ಕೆ ನಿಂತು ನಾವೂ ತಲೆ ಎತ್ತಿ ನಿಲ್ಲುವ ಅವಕಾಶ ಕಲ್ಪಿಸಿಕೊಟ್ಟರು. ಅಷ್ಟಲ್ಲದೆ ನಮ್ಮ ಸಮಾಜದ ಹಿರಿಯ ವಿದ್ವಾಂಸರನ್ನು ಪೀಠಾಧಿಪತಿಗಳನ್ನಾಗಿ ನಿಯೋಜಿಸಿದರು. ಇನ್ನು ಇಬ್ಬರನ್ನು ಧರ್ಮಾಧಿಕಾರಿಗಳನ್ನಾಗಿ ನೇಮಿಸಿದರು. ಅನೇಕರಿಗೆ ಮಠಮುದ್ರಾಧಿಕಾರಸ್ಥಾನವನ್ನು ದಯಪಾಲಿಸಿದರು. ನಮ್ಮವರ ಹೆಚ್ಚಿನ ದೇವಾಲಯಗಳಿಗೆ ಭೇಟಿಯಿತ್ತು ಕುಂಭಾಭಿಷೇಕಾದಿ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಿದರು. ಇಂತಹ ಸಾಕ್ಷಾತ್ ಪರಮೇಶ್ವರ ಸ್ವರೂಪರಾದ ಶಿಷ್ಯಾನುಗ್ರಹತತ್ಪರರಾದ ಗುರುಗಳು ನಮಗೆ ದೊರೆತಿರುವುದು ನಮ್ಮ ಮಹಾಭಾಗ್ಯ. ಆ ಪರಮಪೂಜ್ಯರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ.


ಉಡುಪಿಯಲ್ಲಿ ಶ್ರೀಮಠದ ಶಾಖೆಯನ್ನು ಸ್ಥಾಪಿಸಬೇಕೆಂಬುದು ಪರಿಸರದ ಸಮಾಜಬಂಧುಗಳ ಅನೇಕ ವರ್ಷಗಳ ಬೇಡಿಕೆಯಾಗಿತ್ತು. ಈಗ ಆ ಪ್ರಾರ್ಥನೆಗೆ ಶ್ರೀಗುರುಗಳು ಸಮ್ಮತಿ ಸೂಚಿಸಿದ್ದಾರೆ. ಹಾಗೂ ಸೂಕ್ತಸ್ಥಳವನ್ನು ಗುರುತಿಸಲು ಹೇಳಿದ್ದಾರೆ. ಸುಮಾರು ನಾಲ್ಕು ಎಕರೆ ವಿಸ್ತೀರ್ಣದ ಸಮತಲದ ಭೂಮಿಯನ್ನು ಹುಡುಕಿ ಅದನ್ನು ಶ್ರೀಗುರುಗಳಲ್ಲಿ ನಿವೇದಿಸಿಕೊಂಡಾಗ ಒಪ್ಪಿಕೊಂಡು ವ್ಯಾವಹಾರಿಕ ವ್ಯವಸ್ಥೆಗಳನ್ನು ಶ್ರೀಮಠದ ಮಾನ್ಯ ಆಡಳಿತಾಧಿಕಾರಿಗಳಲ್ಲಿ ಮಾತನಾಡುವಂತೆ ಆದೇಶಿಸಿದರು. ಆಡಳಿತಾಧಿಕಾರಿಗಳಲ್ಲಿ ನಿವೇದಿಸಿಕೊಂಡಾಗ ಎರಡು ಎಕರೆಯನ್ನು ಖರೀದಿಸಲು ಸಿದ್ಧ ಎಂದಿದ್ದಾರೆ. ಉಳಿದ ಭೂಮಿಯನ್ನು ನಮ್ಮ ಸಮಾಜದವರೇ ಖರೀದಿ ಮಾಡಿ ಶ್ರೀಗುರುಗಳಿಗೆ ಅರ್ಪಿಸುವುದೆಂದು ಯೋಚಿಸಿದ್ದೇವೆ. ಒಂದು ಸೆಂಟ್ಸ್ ಭೂಮಿಗೆ ಸುಮಾರು ರೂಪಾಯಿ ಒಂದು ಲಕ್ಷದಂತೆ ಸಂಗ್ರಹಿಸುವ ಯೋಜನೆ ಮಾಡಿದ್ದೇವೆ. ಆದ್ದರಿಂದ ಶ್ರೀಗುರುಪೀಠಕ್ಕೆ ನಮ್ಮ ಆತ್ಯಂತಿಕವಾದ ಕೃತಜ್ಞತೆಯ ಸಮರ್ಪಣೆಗಾಗಿ ನಡೆಸುವ ಈ ಪ್ರಯತ್ನದಲ್ಲಿ ಎಲ್ಲ ಸಮಾಜಬಂಧುಗಳ ಹೃತ್ಪೂರ್ವಕ ಸಹಕಾರ ಅತ್ಯವಶ್ಯಕವಾದುದು. ತಮ್ಮೆಲ್ಲರ ಬೆಂಬಲದ ನಿರೀಕ್ಷೆ ನಮ್ಮದು.

**ವಾಗೀಶ ಎಸ್. ಶಾಸ್ತ್ರೀ**
**ಸಮಿತಿ ಸಂಚಾಲಕರು**
**ಉಡುಪಿ ಪ್ರಾಂತೀಯ ಧರ್ಮಾಧಿಕಾರಿ**
**ಶೃಂಗೇರಿಮಠ**

**ಎ. ಶಿವ ರಾವ್, ಬೆಂಗಳೂರು**
**ಬಿ. ಕೆ. ಧನಂಜಯ ರಾವ್, ಬೆಳ್ತಂಗಡಿ**
**ಕರುಣ್ ರಾವ್ ಬೆಳ್ಳೆ, ಮಂಗಳೂರು**
**ಕೆ. ಮಂಜುನಾಥ ಹೆಬ್ಬಾರ್, ಉಡುಪಿ**
**ಸದಸ್ಯರು, ಶ್ರೀ ಶೃಂಗೇರಿ ಶಂಕರಮಠ, ಉಡುಪಿ ಶಾಖಾ – ನಿವೇಶನ ಸಮಿತಿ**

# ಮಂಗಳೂರಿನ ಶ್ರೀ ಶಾರದಾ ಭಜನಾ ಮಂಡಳಿಯ ಚತುರ್ಥ ವರ್ಷದ ಸಂಭ್ರಮ

ದಿನಾಂಕ 13–6–2022 ಶ್ರೀ ಶಾರದಾ ಭಜನಾ ಮಂಡಳಿಯು 4ನೇ ವರ್ಷಕ್ಕೆ ಪಾದಾರ್ಪಣೆಗೈದ ಸುಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಸಂಭ್ರಮಾಚರಣೆ ಸಮಾರಂಭ ನಡೆಯಿತು. ಭಜನಾ ತಂಡದ ಸದಸ್ಯೆ ಶ್ರೀಮತಿ ಆಶಾ ರವೀಂದ್ರ ಮತ್ತು ಬಳಗದವರು ಸುಶ್ರಾವ್ಯವಾಗಿ ವಿಘ್ನನಿವಾರಕ ಗಣಪತಿಯನ್ನು ಸ್ತುತಿಸಿದರು. ಶ್ರೀಮತಿ ಸುಮಂಗಲಾ ಪ್ರಭಾಕರ್ ಇವರು ಸರ್ವರನ್ನೂ ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು.



ಶ್ರೀಮತಿ ವೀಣಾ ಗಿರಿಧರ್ ಭಜನಾ ಮಂಡಳಿಯ ಸ್ಥಾಪನೆ ಹಾಗೂ ಬೆಳೆದು ಬಂದ ದಾರಿಯ ಬಗ್ಗೆ ಪ್ರಾಸ್ತಾವಿಕವಾಗಿ ವಿವರಿಸಿದರು. ಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿ ಇವರು ದೀಪಪ್ರಜ್ವಲನೆ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸಭಾದ ಕಾರ್ಯದರ್ಶಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆಯವರು ಭಜನೆಯಿಂದ ನಮ್ಮ ಮನಸ್ಸಿಗೆ ಆಗುವ ನೆಮ್ಮದಿ, ಸತ್‌ಸಂಸ್ಕಾರ ಹಾಗೂ ಸಂಘಟನೆಯ ಬಗ್ಗೆ ವಿವರಿಸಿದರು. ಈ ಭಜನಾ ಸಂಸ್ಕೃತಿ–ಸಂಸ್ಕಾರವನ್ನು ಇನ್ನಿತರ ಕಡೆಗಳಲ್ಲೂ ಪಸರಿಸಬೇಕೆಂದು ಕರೆಕೊಟ್ಟರು. ಶಾರದಾ ಭಜನಾ ಮಂಡಳಿಯ ರಚನೆ ಹಾಗೂ ಶೃಂಗೇರಿ ಗುರುಗಳಿಂದ ವಿರಚಿತವಾದ ಭಜನೆಗಳನ್ನು ಭಜನಾ ಗುರು ಶ್ರೀ ಸುಬ್ಬರಾವ್ ಪೊಳಲಿಯವರ ಮೂಲಕ ಕಲಿಯಲು ಪ್ರೇರೇಪಿಸಿದವರು ಶ್ರೀ ಕರುಣ್ ರಾವ್ ಬೆಳ್ಳೆಯವರು.

ಭಜನಾ ಸದಸ್ಯರಾದ ಶ್ರೀಮತಿ ಸ್ನೇಹಲತಾ ದಿವಾಕರ್ ಅವರು ತಮ್ಮ 3 ವರ್ಷಗಳ ಅನುಭವವನ್ನು ತಾವು ಕಲಿಯುವ ಬಗೆ, ಇತರರೊಂದಿಗೆ ತಮ್ಮ ಸ್ನೇಹ, ಗುರುಗಳು ಕಲಿಸುವ ರೀತಿ, ಎಲ್ಲರನ್ನೂ ಹಾಡಿಸುವ ನೈಪುಣ್ಯತೆ ಇತ್ಯಾದಿಗಳ ಬಗ್ಗೆ ತಿಳಿಸುತ್ತಾ ತಮ್ಮ ಹಾಸ್ಯಚಟಾಕಿಗಳಿಂದ ಎಲ್ಲರನ್ನೂ ನಗೆಗಡಲಲ್ಲಿ ತೇಲಿಸಿದರು. ತಬಲ, ಹಾರ್ಮೋನಿಯಂಗಳನ್ನು ಭಜನೆಯಲ್ಲಿ ನುಡಿಸುವ ಮೂಲಕ ಸಹಕರಿಸುತ್ತಿರುವ ಶ್ರೀ ಕೃಷ್ಣರಾಜ ರಾವ್, ಭಜನಾ ಸದಸ್ಯೆ ಶ್ರೀಮತಿ ರಮಾಮಣಿಯವರು, ಕುಸುಮಾ ನವೀನ್‌ರವರು ತಂಡ ರಚನೆಯ ಕಾರಣವಾದ ಬಗ್ಗೆ, ಗುರುಗಳ ವಿಶೇಷ ರೀತಿಯ ಕಲಿಕಾ ವಿಧಾನದ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಗುರುಗಳಾದ ಶ್ರೀ ಸುಬ್ಬ ರಾವ್ ಪೊಳಲಿಯವರು ಸ್ವತಃ ಸಾಧನೆಯಿಂದ ಕಲಾರಾಧನೆಯಲ್ಲಿ ತೊಡಗಿಸಿ ಹಾರ್ಮೋನಿಯಂ, ಸುಗಮ ಸಂಗೀತ, ಭಜನೆಗಳನ್ನು ಹಲವಾರು ಕಡೆಗಳಲ್ಲಿ ಉಚಿತವಾಗಿ ಧಾರೆಯೆರೆಯುತ್ತಿದ್ದು ತಮ್ಮ ಅನಿಸಿಕೆಯಲ್ಲಿ ಭಜನೆ ನಿರಂತರವಾಗಿ ನಡೆಯಲು ಮಕ್ಕಳನ್ನು ತಂಡಕ್ಕೆ ಸೇರಿಸಿಕೊಳ್ಳಬೇಕು. ನಕಾರಾತ್ಮಕ ಚಿಂತನೆಗಳನ್ನು ಬಿಟ್ಟು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕು. ನಮ್ಮ ಎಲ್ಲಾ ವೈಯಕ್ತಿಕ ಸಮಸ್ಯೆಗಳಿಗೆ ಭಜನೆಯೂ ಒಂದು ಪರಿಹಾರ ಎಂಬ ತಮ್ಮ ಅಮೃತವಾಣಿಗಳಿಂದ ಎಲ್ಲರನ್ನೂ ಪ್ರೋತ್ಸಾಹಿಸಿದರು.

ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆಯವರು ಕಾರ್ಯಕ್ರಮದ ಬಗ್ಗೆ ಭಜನೆಯ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು.

ಸಭಾ ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್‌ರವರು ಛಾಯಾಚಿತ್ರಗಳನ್ನು ತೆಗೆಯುವ ಮೂಲಕ ಕಾರ್ಯಕ್ರಮವನ್ನು ದಾಖಲಿಸಿದರು. ಶ್ರೀಮತಿ ಸ್ನೇಹಲತಾ ದಿವಾಕರ್ ದಂಪತಿಗಳ ಹಾಗೂ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ದಂಪತಿಗಳ ವಿವಾಹ ಮಹೋತ್ಸವದ ಸಂಭ್ರಮಾಚರಣೆ ಹಾಗೂ ಶ್ರೀಮತಿ ವಲ್ಲಿ, ಶ್ರೀ ಜ್ಞಾನೇಶ್, ಶ್ರೀಮತಿ ಸರೋಜಿನಿ ಕುಡುಪುರವರ ಸಹಕಾರದಿಂದ ಸಿಹಿ–ತಿಂಡಿ, ಹಣ್ಣು–ಹಂಪಲುಗಳನ್ನು ವಿತರಿಸಲಾಯಿತು. ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಧನ್ಯವಾದ ನೀಡಿದರು. ಶ್ರೀಮತಿ ಶಾರದಾ ಎನ್. ರಾವ್‌ರವರು ಕಾರ್ಯಕ್ರಮದ ನಿರೂಪಕರಾಗಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.


*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

"Vijaya Nivas", Opp. Pio Mall
Bejai Church Road, Mangalore - 4



*Manish Rao U.*
Tel : (O) 2223301
Mobile : 9448726499 / 8884284939


**NAVA COMPUTERS**

Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

# ಬೆಂಗಳೂರು ಕೋಡಿಗೆಹಳ್ಳಿ ಜ್ಞಾನಶಕ್ತಿ ಶ್ರೀ ಸುಬ್ರಹ್ಮಣ್ಯ ದೇವರಿಗೆ ಬ್ರಹ್ಮಕುಂಭಾಭಿಷೇಕ



ನವಗ್ರಹ ಪ್ರತಿಷ್ಠಾಪನೆ ಮತ್ತು ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮವನ್ನು ಶೃಂಗೇರಿ ಜಗದ್ಗುರುಗಳಿಂದಲೇ ನಡೆಸಬೇಕು ಎನ್ನುವುದು ಎಬಿಎಸ್‌ಬಿಎಸ್ ಸಂಕಲ್ಪ. ಜೂನ್ 19 ಭಾನುವಾರದಂದು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳಿಂದ ಈ ಸಂಕಲ್ಪ ಪೂರ್ಣಗೊಂಡು, ಯಶಸ್ವಿಯಾಗಿ ಬ್ರಹ್ಮಕುಂಭಾಭಿಷೇಕ ಮಹೋತ್ಸವ ಸಂಪನ್ನಗೊಂಡಿತು.

**ಗಾಯತ್ರಿ ಹೋಮ :**

ಜೂನ್ 15ರ ಬೆಳಗ್ಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದ ವೈದಿಕ ತಂಡ ಕೋಡಿಗೆಹಳ್ಳಿಗೆ ಆಗಮಿಸಿತು. ಮೆರವಣಿಗೆಯ ಮೂಲಕ ಪೂರ್ಣಕುಂಭ ಸ್ವಾಗತದೊಂದಿಗೆ ವೈದಿಕ ತಂಡವನ್ನು ದೇವಸ್ಥಾನಕ್ಕೆ ಸ್ವಾಗತಿಸಲಾಯಿತು. ಇದಾದ ಬಳಿಕ ಯಾಗಶಾಲೆಯಲ್ಲಿ ನಿರ್ಮಾಣಗೊಂಡ 6 ಯಜ್ಞಕುಂಡಗಳಲ್ಲಿ ಗಾಯತ್ರಿ ಹೋಮ ಆರಂಭವಾಯಿತು. ಗಾಯತ್ರಿ ಹೋಮ ಮಾಡುವುದಕ್ಕೂ ಕಾರಣವಿದೆ. ಯಾವುದೇ ಒಂದು ದೊಡ್ಡ ಕಾರ್ಯ ಮಾಡಬೇಕಾದರೆ ಸಿದ್ಧಿ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಒಂದು ತಿಂಗಳ ಮೊದಲೇ ಅಕ್ಷರ ಲಕ್ಷ (24 ಲಕ್ಷ) ಗಾಯತ್ರಿ ಜಪ ಮಾಡುವ ಸಂಕಲ್ಪ ಮಾಡಲಾಗಿತ್ತು. ಸಮಾಜದ 100ಕ್ಕೂ ಹೆಚ್ಚಿನ ಬಾಂಧವರು ಪ್ರತಿನಿತ್ಯ ಸಾವಿರ ಜಪ ಮಾಡಿದ್ದರು. ವಿಶೇಷ ಏನೆಂದರೆ ಸಂಕಲ್ಪ 24 ಲಕ್ಷ ಆಗಿದ್ದರೂ ಒಟ್ಟು 25 ಲಕ್ಷ ಗಾಯತ್ರಿ ಜಪವನ್ನು ಮಾಡಲಾಗಿತ್ತು. ಒಂದು ಕಡೆಯಲ್ಲಿ ಗಾಯತ್ರಿ ಹೋಮ ನಡೆಯುತ್ತಿದ್ದರೆ ಮತ್ತೊಂದು ಕಡೆ ಸಮಾಜದ ಮಹಿಳೆಯರು ಸೌಂದರ್ಯಲಹರಿ ಪಾರಾಯಣ ಮಾಡಿ ದೇವರ ಕೃಪೆಗೆ ಪಾತ್ರರಾದರು.

ಬುಧವಾರ ಸಂಜೆಯಿಂದ ಆರಂಭಗೊಂಡ ಧಾರ್ಮಿಕ ಕಾರ್ಯಕ್ರಮಗಳು ಭಾನುವಾರ ಮುಕ್ತಾಯಗೊಂಡಿತು. ಜೂನ್ 17ರಂದು ಮಯೂರ ಬಿಂಬ ಪ್ರತಿಷ್ಠೆ, ಚಂಡಿಕಾ ಹೋಮ, ಲಕ್ಷ ಪುಷ್ಪಾರ್ಚನೆ ನಡೆದರೆ ಜೂನ್ 18ರಂದು ನಾಗದೇವರ ಸನ್ನಿಧಿಯಲ್ಲಿ ನವಕಲಶ ಪೂಜೆ, ಅಧಿವಾಸ ಹೋಮ, ಆಶ್ಲೇಷಾ ಬಲಿ, ನವಗ್ರಹ ದೇವತಾ ಬಿಂಬಗಳ ಶಯ್ಯಾಧಿವಾಸ ಪ್ರತಿಷ್ಠಾಪೂರ್ವ ವಿಧಿಗಳು, ಕಲಶ ಸ್ಥಾಪನೆಯಂತಹ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು.

ಜೂನ್ 19 ಭಾನುವಾರದಂದು ಬೆಳಗ್ಗೆ 7–35ರ ಶುಭ ಮಿಥುನ ಲಗ್ನದಲ್ಲಿ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನವಗ್ರಹ ದೇವತಾ ಬಿಂಬ ಪ್ರತಿಷ್ಠೆ, ಕಲಶಾಭಿಷೇಕ ನಡೆಯಿತು.

**ಶ್ರೀಗಳಿಂದ ಬ್ರಹ್ಮಕುಂಭಾಭಿಷೇಕ :**

ಹಲವು ವರ್ಷಗಳಿಂದ ಕಾದಿದ್ದ ಸಮಯ ಬಂದೇ ಬಿಟ್ಟಿತು. ಶ್ರೀಗಳು ದೇವಸ್ಥಾನಕ್ಕೆ ತೆರಳಿ ಪೂಜೆ ಮಾಡಿ ಸುಬ್ರಹ್ಮಣ್ಯನಿಗೆ ಅಭಿಷೇಕ ಮಾಡಿದರು. ದೇವಸ್ಥಾನದ ಒಳಗಿನ ಪೂಜೆಗಳು ಮುಗಿದ ಬಳಿಕ ನೇರವಾಗಿ ಶಿಖರ ಅಭಿಷೇಕ ಮಾಡಲು ಮೆಟ್ಟಿಲು ಹತ್ತಿದರು. ಶಿಖರ ಅಭಿಷೇಕ ಮಾಡಲೆಂದೇ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಮೆಟ್ಟಿಲುಗಳನ್ನು ಏರಿದ ಶ್ರೀಗಳು ಸುಬ್ರಹ್ಮಣ್ಯನ ಮೇಲಿರುವ ಶಿಖರಕ್ಕೆ ಕುಂಭಾಭಿಷೇಕ ಮಾಡಿದರು. ಮೇಲುಗಡೆ ಹೋಗಲು ಎಲ್ಲರಿಗೂ ಸಾಧ್ಯವಾಗದ ಕಾರಣ ಮೂರು ದೊಡ್ಡ ಸ್ಕ್ರೀನ್‌ನಲ್ಲಿ ಲೈವ್ ಟಿವಿಯನ್ನು ಹಾಕಲಾಗಿತ್ತು. ಭಕ್ತಾಭಿಮಾನಿಗಳು ಈ ದೃಶ್ಯವನ್ನು ನೋಡಿ ಕಣ್ತುಂಬಿಕೊಂಡರು.

ಶೃಂಗೇರಿ ಶ್ರೀಗಳು ಈ ಕಾರ್ಯಕ್ರಮ ಮುಗಿಸಿದ ಬಳಿಕ ನೇರವಾಗಿ ಅಂದು ಪ್ರತಿಷ್ಠಾಪನೆಗೊಂಡಿದ್ದ ನವಗ್ರಹ ಮೂರ್ತಿಗಳಿರುವ ಗುಡಿಗಳಿಗೆ ತೆರಳಿ ಪೂಜೆ ಮಾಡಿದರು. ಇದಾದ ಬಳಿಕ ವೇದಿಕೆಯ ಕಾರ್ಯಕ್ರಮಕ್ಕೆ ಆಗಮಿಸಿದರು. ವೇದಿಕೆಯ ಮೇಲೆ ಶ್ರೀಗಳು ಮಾತ್ರ ಆಸೀನರಾಗಿದ್ದರೆ, ಎಬಿಎಸ್‌ಬಿಎಸ್ ಕಾರ್ಯಕಾರಿ ಸಮಿತಿ ಅಧ್ಯಕ್ಷರು, ಸದಸ್ಯರು, ಬ್ರಹ್ಮಕುಂಭಾಭಿಷೇಕಕ್ಕೆ ಸಂಬಂಧಿಸಿದ ಎಲ್ಲ ಸಮಿತಿಯ ಮುಖ್ಯಸ್ಥರು ಕೆಳಗಡೆ ಆಸೀನರಾಗಿದ್ದರು. ಈ ಸಂದರ್ಭದಲ್ಲಿ ಬೆಂಗಳೂರಿನ ಸಂಘದಲ್ಲಿ ಅಧಿಕ ಸಮಯ ಅಧ್ಯಕ್ಷರಾಗಿ ಹಾಗೂ ಅನೇಕ ಜವಾಬ್ದಾರಿ ವಹಿಸಿ, ಇತರ ಸಮಾಜ ಸೇವೆಯನ್ನು ಪರಿಗಣಿಸಿ ಅಜ್ಜಾವರ ಶಿವರಾಯರನ್ನು ಸನ್ಮಾನಿಸಲಾಯಿತು. ಈ ವೇಳೆ ಜ್ಞಾನಶಕ್ತಿ ವಿಷನ್ 2025 ಸ್ಮರಣ ಸಂಚಿಕೆಯನ್ನು ಶ್ರೀಗಳು ಬಿಡುಗಡೆ ಮಾಡಿದರು.

ತಮ್ಮ ಅನುಗ್ರಹ ಭಾಷಣದಲ್ಲಿ ಶ್ರೀಗಳು 'ಒಂದೊಂದು ಸಂದರ್ಭದಲ್ಲಿ ಭಗವಂತ ಒಂದೊಂದು ರೂಪದಲ್ಲಿ ಅವತಾರ ಎತ್ತಿ ರಾಕ್ಷಸರನ್ನು ಸಂಹಾರ ಮಾಡಿ ಲೋಕವನ್ನು ಉದ್ಧರಿಸಿದ್ದಾನೆ. ಪರಮಾತ್ಮನಲ್ಲಿ ಯಾವುದೇ ಭೇದ–ಭಾವ ಇಲ್ಲ. ನಾವು ಒಬ್ಬನೇ ಪರಮಾತ್ಮನನ್ನು ಪೂಜಿಸುತ್ತೇವೆ. ಆದರೆ ರೂಪ ಮಾತ್ರ ಬೇರೆ. ಈ ಕಾರಣಕ್ಕೆ ಆತನಿಗೆ ವಿವಿಧ ಹೆಸರು ಬಂದಿದೆ. ರೂಪ ಬೇರೆ ಬೇರೆಯಾದರೂ ದೇವರ ಚೈತನ್ಯ ಮಾತ್ರ ಒಂದೇ. ಸುಬ್ರಹ್ಮಣ್ಯನ ಪೂಜೆ ಅನಾದಿಕಾಲದಿಂದಲೂ ಬಂದಿದೆ. ದೇವರ ಅನುಗ್ರಹದಿಂದ ಅಸಾಧ್ಯವಾದ ಕೆಲಸಗಳು ಆಗಿವೆ. ಹೀಗಾಗಿ ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಭಗವಂತನ ಆರಾಧನೆ ಮಾಡಬೇಕು' ಎಂದು ಹೇಳಿದರು.

'ವಿಶೇಷವಾಗಿ ಶೃಂಗೇರಿ ಪೀಠಕ್ಕೆ ಸ್ಥಾನಿಕ ಸಮಾಜದವರು ಪ್ರೀತಿಯ ಶಿಷ್ಯಂದಿರು. ಇದು ಅತ್ಯಂತ ಸಂತೋಷವಾಗಿರುವ ವಿಷಯ. ಪ್ರತಿವರ್ಷ ಚಾತುರ್ಮಾಸ್ಯದ ಸಮಯದಲ್ಲಿ ಗುರುಗಳ ಆಶೀರ್ವಾದಕ್ಕೆ ಶೃಂಗೇರಿಗೆ ಬರುತ್ತಿರುವ ಈ ಸಮಾಜದ ಮೇಲೆ ನಮಗೆ ವಿಶೇಷ ವಾತ್ಸಲ್ಯವಿದೆ. ನಮ್ಮ ಶಿಷ್ಯರು ಚೆನ್ನಾಗಿರಬೇಕು. ಅವರಿಗೆ ಒಳ್ಳೆಯದಾಗಬೇಕು ಎಂದು ನಾವು ಪೂಜೆ ಮಾಡುವಾಗ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇವೆ. ಗುರುಗಳು ಸದಾಕಾಲ ಶಿಷ್ಯರ ಹಿತವನ್ನು ಬಯಸುತ್ತಿದ್ದರೆ ಶಿಷ್ಯರು ಸದಾಕಾಲ ಗುರುಗಳ ಸೇವೆಯನ್ನು ಬಯಸುತ್ತಿರುತ್ತಾರೆ. ಇಂತಹ ವಿಶಿಷ್ಟವಾದ ಮಧುರ ಸಂಬಂಧ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೂ ಮತ್ತು ಶೃಂಗೇರಿ ಪೀಠಕ್ಕೂ ಇದೆ. ಸ್ಥಾನಿಕ ಬಾಂಧವರ ಅನೇಕ ವರ್ಷದ ಪ್ರಾರ್ಥನೆ ಇಂದು ಸಂಪನ್ನವಾಯಿತು. ಈ ಸಮಾಜವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕು. ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದೇ ಈಗ ಇಲ್ಲಿ ಕಂಡು ಬಂದಂತೆ ಐಕ್ಯಮತ್ಯದಿಂದ ಮುನ್ನಡೆಯಬೇಕು ಮತ್ತು ಅಭಿವೃದ್ಧಿಗೆ ಪ್ರತಿಯೊಬ್ಬರು ಪಾತ್ರರಾಗಬೇಕು' ಎಂದು ಆಶೀರ್ವಚನ ನೀಡಿದರು. ಗುರುಗಳು ಆಶೀರ್ವಾದ ನೀಡಿದ ಬಳಿಕ ಶಿಷ್ಯರಿಗೆ ಮಂತ್ರಾಕ್ಷತೆಯನ್ನು ನೀಡಿದರು. ಮಧ್ಯಾಹ್ನದ ಭೋಜನ ಸಮಯ ಮೀರಿದ್ದರೂ ಸಾವಿರಕ್ಕೂ ಹೆಚ್ಚು ಸಂಖ್ಯೆಯ ಭಕ್ತರು ಸಾಲಾಗಿ ನಿಂತು ಗುರುಗಳಿಂದ ಮಂತ್ರಾಕ್ಷತೆಯನ್ನು ಪಡೆದುಕೊಂಡರು.

ಪ್ರತಿ ದಿವಸ ಬೆಳಗ್ಗೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಭಜನಾ ಮಂಡಳಿಯ ಸದಸ್ಯರ ಭಜನಾ ಕಾರ್ಯಕ್ರಮದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಳ್ಳುತ್ತಿದ್ದವು. ಕರ್ನಾಟಕ ಕಲಾಶ್ರೀ ಎನ್. ಕೆ. ಮೋಹನ್ ಕುಮಾರ್ ನಿಟ್ಟೂರು ಅವರಿಂದ ಹರಿಕಥೆ, ಚಿಂತಕ ಚಕ್ರವರ್ತಿ ಸೂಲಿಬೆಲೆ ಅವರಿಂದ ಧಾರ್ಮಿಕ ಪ್ರವಚನ, ಶಾರದಾ ಯಕ್ಷಗಾನ ಕಲಾವಿದರು ಉಡುಪಿ ಇವರಿಂದ ಸಮಗ್ರ ಕಂಸ ಯಕ್ಷಗಾನ, ಚಿನ್ಮಯ ಮಿಷನ್‌ನ ಬ್ರಹ್ಮಾನಂದ ಸರಸ್ವತಿ ಅವರಿಂದ ಪ್ರವಚನ, ಶ್ರೀ ರಾಧಾಕೃಷ್ಣ ಕಲ್ಚಾರ್, ಶ್ರೀ ಸುಬ್ರಾಯ ಸಂಪಾಜೆ ಇವರಿಂದ ಕಾವ್ಯವಾಚನ, ವಿದುಷಿ ಸಂಧ್ಯಾ ಕೇಶವ್ ರಾವ್ ಮತ್ತು ತಂಡದವರಿಂದ ಶಂಕರ ವಿಜಯ ನೃತ್ಯ ರೂಪಕ, ವಿದುಷಿ ಮಾನಸಿ ಪ್ರಸಾದ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಪ್ರಸಿದ್ಧ ತೆಂಕುತಿಟ್ಟು ಕಲವಿದರಿಂದ ಸುಭದ್ರಾ ಕಲ್ಯಾಣ – ಹಿರಣ್ಯಾಕ್ಷ ವಧೆ ಯಕ್ಷಗಾನದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಕೊನೆಗೊಂಡಿತು. 5 ದಿನಗಳ ಕಾರ್ಯಕ್ರಮದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ ದೇವರ ಪ್ರಸಾದವನ್ನು ಸ್ವೀಕರಿಸಿದರು.

***ಬ್ರಹ್ಮಕುಂಭಾಭಿಷೇಕದ ವೀಡಿಯೋ ಕಹಳೆ ಯೂಟ್ಯೂಬ್ ವಾಹಿನಿಯಲ್ಲಿ ಲಭ್ಯವಿದ್ದು 'SHRI JNANASHAKTHI II ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಬ್ರಹ್ಮಕುಂಭಾಭಿಷೇಕ ಹಾಗೂ ನವಗ್ರಹ ಪ್ರತಿಷ್ಠಾ ಮಹೋತ್ಸವ' ಎಂದು ಸರ್ಚ್ ಕೊಟ್ಟು ವೀಡಿಯೋ ವೀಕ್ಷಣೆ ಮಾಡಬಹುದು.***

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್
# 'ಶಂಕರ ಜಯಂತಿ ಆಚರಣೆ'



ತಾರೀಕು 8–5–2022ನೇ ರವಿವಾರ ನಮ್ಮ ಸಂಘದ ವತಿಯಿಂದ ಸುರತ್ಕಲ್ ಗೋವಿಂದದಾಸ ಕಾಲೇಜು ಇದರ ಎದುರುಗಡೆ ಇರುವ 'ಮಾನಸ' ಕಟ್ಟಡದಲ್ಲಿರುವ 'ವಿವೇಕಾನಂದ ಸಭಾಗೃಹ'ದಲ್ಲಿ ಸಂಜೆ 5–30ಕ್ಕೆ ಸರಿಯಾಗಿ 'ಶಂಕರ ಜಯಂತಿ'ಯನ್ನು ಆಚರಿಸಲಾಯಿತು. ಶಂಕರಾಚಾರ್ಯರ ಜೀವನ ಚರಿತ್ರೆಯ ಬಗ್ಗೆ ಕರ್ನಾಟಕ ಆಯುರ್ವೇದ ಕಾಲೇಜು, ಮಂಗಳೂರಿನ ಎಚ್.ಓ.ಡಿ. ಹಾಗೂ ಜ್ಯೋತಿಷ್ಯದಲ್ಲಿ ಎಂ.ಎ., ಸಂಸ್ಕೃತದಲ್ಲಿ ಎಂ. ಎ. ಪಡೆದಿರುವ ಡಾ| ಹರಿಹರ ಪ್ರಸಾದ್‌ರವರು ಮನದಟ್ಟುವಂತೆ ವಿವರಿಸಿದರು. ಬಳಿಕ ನಮ್ಮ ಸಮಾಜದ ನಾಲ್ವರನ್ನು ಗೌರವಿಸಲಾಯಿತು. ನಮ್ಮ ಸಂಘದ ಭಜನಾ ಗುರುಗಳಾದ ಶ್ರೀ ಹರಿನಾರಾಯಣ್ ಹಾಗೂ ಕ್ಷಮಾಗೌರಿ ದಂಪತಿಗಳು, ಹಾರ್ಮೋನಿಯಂ ಗುರುಗಳಾದ ಶ್ರೀ ಕೃಷ್ಣರಾಜ ರಾವ್, ತಬಲ ವಾದಕರಾದ ಶ್ರೀ ಸುದರ್ಶನ್ ರಾವ್ ಇವರನ್ನು ಸನ್ಮಾನಿಸಲಾಯಿತು.

ನಂತರ ನಮ್ಮ ಸಂಘದ ಭಜನಾ ಮಂಡಳಿಯ ಸದಸ್ಯರಿಂದ ಭಜನೆಯು ನಡೆಯಿತು. ಆ ಬಳಿಕ ಶ್ರೀ ಸುಬ್ರಹ್ಮಣ್ಯ ರಾವ್ ಪಾವಂಜೆ ಇವರ ನೇತೃತ್ವದಲ್ಲಿ ಪೂಜೆ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ನೇತೃತ್ವದಲ್ಲಿ ಹಾಗೂ ಪದಾಧಿಕಾರಿಗಳು, ಯುವ ವೇದಿಕೆ ಪದಾಧಿಕಾರಿಗಳು ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷೆ ಹಾಗೂ ಇತರ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯಿತು. ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀ ಪ್ರವೀಣ್ ಕುಮಾರ್ ಮತ್ತು ಬಳಗ ಸಂಜೆಯ ಉಪಾಹಾರದ ವ್ಯವಸ್ಥೆಯನ್ನು ಮಾಡಿದರು.


ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –

**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003


## ಸ್ಥಾನಿಕ ಸಮಾಜದ ಸಾಧಕರು



ವಿಧಾನಸೌಧದ ಹಣಕಾಸು ವಿಭಾಗದಲ್ಲಿ ಉಪ ಕಾರ್ಯದರ್ಶಿ ಆಗಿರುವ **ಶ್ರೀಮತಿ ವತ್ಸಲಾ**ರವರು ಈ ಬಾರಿ ಕರ್ನಾಟಕ ಸರ್ಕಾರ ಕೊಡಮಾಡುವ 'ಸರ್ವೋತ್ತಮ ಸೇವಾ ಪ್ರಶಸ್ತಿ' ಗಳಿಸಿದ್ದಾರೆ. ಇವರು ಶ್ರೀ ಯು. ಜಿ. ಸುರೇಶ್ ಇವರ ಧರ್ಮಪತ್ನಿ. ಅವರಿಗೆ ಜ್ಞಾನಶಕ್ತಿ ಶ್ರೀ ಸುಬ್ರಹ್ಮಣ್ಯ ದೇವರು ಉತ್ತಮ ಆರೋಗ್ಯ ಭಾಗ್ಯಗಳನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.

ಚಿಕ್ಕಮಗಳೂರಿನ ಡಿ. ಸಿ. ಕಚೇರಿಯಲ್ಲಿ ಶಿರಸ್ತೇದಾರರಾಗಿ ಸೇವೆಸಲ್ಲಿಸುತ್ತಿರುವ **ಶ್ರೀಮತಿ ಶೈಲಶ್ರೀ** ಈ ಬಾರಿ ಕರ್ನಾಟಕ ಸರಕಾರ ಕೊಡಮಾಡುವ 'ಸರ್ವೋತ್ತಮ ಸೇವಾ ಪ್ರಶಸ್ತಿ' ಗಳಿಸಿದ್ದಾರೆ.

ಇವರು ಶ್ರೀ ಪ್ರಕಾಶ್ ಬಿಕ್ಕೋಡುರವರ ಧರ್ಮಪತ್ನಿ.



## ಭವತೀ ಭಿಕ್ಷಾಂ ದೇಹಿ..



ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ರವಿಕುಮಾರ್‌ರವರ ಸುಪುತ್ರ **ಚಿ| ಬಿಷಜ್**ನ ಬ್ರಹ್ಮೋಪದೇಶ ತಾರೀಕು 12–06–2022ನೇ ರವಿವಾರ ಮೈಸೂರಿನ 'ಕೃಷ್ಣಧಾಮ' ರಜತ ಭವನದಲ್ಲಿ ನೆರವೇರಿತು.

* * *

ಶ್ರೀ ಲಕ್ಷ್ಮೀನಾರಾಯಣ್ ಗೌಂಡಲ್ಕರ್ ಮತ್ತು ಶ್ರೀಮತಿ ರಮ್ಯಾರವರ ಸುಪುತ್ರ **ಚಿ| ಸಾಕೇತ್**ನ ಬ್ರಹ್ಮೋಪದೇಶ ತಾರೀಕು 10–06–2022ನೇ ಶುಕ್ರವಾರ ಮಧೂರು ಪರಕ್ಕಿಲ ಮಹಾದೇವ ಶಾಸ್ತಾರ ವಿನಾಯಕ ದೇವಸ್ಥಾನದ 'ಶ್ರೀ ನಟರಾಜ ಮಂಟಪ'ದಲ್ಲಿ ನೆರವೇರಿತು.

* * *

ಶ್ರೀಮತಿ ವಾಣಿ ಮತ್ತು ಶ್ರೀ ಸುಭಾಶ್ಚಂದ್ರರವರ ಸುಪುತ್ರ **ಚಿ| ಸ್ಕಂದ**ನ ಬ್ರಹ್ಮೋಪದೇಶ ತಾರೀಕು 22–6–2022ನೇ ಬುಧವಾರ ಕೋಟೇಶ್ವರದ 'ಶ್ರೀಮತಿ ಕಮಲಮ್ಮ ಸರ್ವೋತ್ತಮ ಬುಧ್ಯ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

## ಹೊಸ ಬಾಳಿನ ಹೊಸಿಲಲಿ ನಿಂತಿರುವ...

ಶ್ರೀ ಯು. ಶಶಿಕಾಂತ್ ರಾವ್ ಮತ್ತು ಶ್ರೀಮತಿ ಚಂದ್ರಮಣಿಯವರ ಸುಪುತ್ರಿ **ಚಿ| ಸೌ| ಅನುಷಾ ರಾವ್** ಇವರ ವಿವಾಹವು ಕೋಲ್ಪೆ ಶ್ರೀಮತಿ ಕಲಾವತಿ ಮತ್ತು ಶ್ರೀ ಕುಮಾರಸ್ವಾಮಿಯವರ ಸುಪುತ್ರ **ಚಿ| ವಿನೋದ್ ಕುಮಾರ್ ಕೋಲ್ಪೆ** ಇವರೊಂದಿಗೆ ತಾ. 10–6–2022ನೇ ಶುಕ್ರವಾರ ಉಡುಪಿಯ 'ಶ್ರೀ ಶಾರದಾ ಮಂಟಪ'ದಲ್ಲಿ ನೆರವೇರಿತು.

❖ ❖ ❖

ಕುಳಾಯಿಯ ಶ್ರೀಮತಿ ಸೌಭದ್ರೆ ಮತ್ತು ಕೆಡೆಂಜಿ ಶ್ರೀ ಸದಾಶಿವ ಶಾಸ್ತ್ರಿಗಳ ಸುಪುತ್ರ **ಚಿ| ವಿಷ್ಣುಪ್ರಸಾದ್** ಇವರ ವಿವಾಹವು ಶ್ರೀಮತಿ ವಿದ್ಯಾ ಮತ್ತು ಶ್ರೀ ರವಿಚಂದ್ರನ್ ಎಸ್. ಇವರ ಸುಪುತ್ರಿ **ಚಿ| ಸೌ| ಐಶ್ವರ್ಯ** ಇವರೊಂದಿಗೆ ಚೆನ್ನೈನ 'ಕಂಚಿ ಮಹಾಸ್ವಾಮೀ ಅನಂತ ಮಂಟಪ'ದಲ್ಲಿ ತಾರೀಕು 13–6–2022ನೇ ಸೋಮವಾರ ನೆರವೇರಿತು.

❖ ❖ ❖

ಶ್ರೀಮತಿ ಶಶಿಕಲಾ ಮತ್ತು ಡಾ. ಹರಪ್ರಸಾದ್ ತುದಿಯಡ್ಕ ಇವರ ಸುಪುತ್ರಿ **ಚಿ| ಸೌ| ಅಖಿಲಾ** ಇವರ ವಿವಾಹವು ಶ್ರೀಮತಿ ಸರೋಜ ಮತ್ತು ಸಾಂತೂರು ಶ್ರೀ ರಘುವೀರ್ (ಅಶೋಕ) ರಾವ್ ಇವರ ಸುಪುತ್ರ **ಚಿ| ರಜತ್** ಇವರೊಂದಿಗೆ ತಾರೀಕು 17–06–2022ನೇ ಶುಕ್ರವಾರ ಸುಳ್ಯದ 'ಕುಂಭಕೋಡು ಕಸ್ತೂರಿ ಅಚ್ಯುತ ಭಟ್ ಶಶಿಕಲಾ ಮಂದಿರ'ದಲ್ಲಿ ನೆರವೇರಿತು.

❖ ❖ ❖

ಶ್ರೀಮತಿ ಶ್ಯಾಮಲಾ ಮತ್ತು ದಿ| ವಿಘ್ನೇಶ್ ಶಾನುಭೋಗ್‌ರವರ ಸುಪುತ್ರ **ಚಿ| ಓಂಕಾರ್** ಇವರ ವಿವಾಹವು ಶ್ರೀ ಸುಬ್ರಾಯ ಉಬರಳೆ ಮತ್ತು ಶ್ರೀಮತಿ ಪ್ರಫುಲ್ಲರವರ ಸುಪುತ್ರಿ **ಚಿ| ಸೌ| ರಾಜೇಶ್ವರಿ** ಇವರೊಂದಿಗೆ ತಾ. 23–6–2022ನೇ ಗುರುವಾರ ಬೆಂಗಳೂರಿನ ಕೋಡಿಗೆಹಳ್ಳಿ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನೆರವೇರಿತು.


ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

## 'ಅನುಷಾ ಅನುರಾಗದ ಮುಸ್ಸಂಜೆ' ಕಾರ್ಯಕ್ರಮ




ಕವಿ ದಿವಂಗತ ಬಿ. ಎನ್. ಗೋಪಾಲಕೃಷ್ಣ ರಾವ್ ಅವರ ನೆನಪಿನಂಗಳದ ಜೊತೆ ಅನುಷಾ ಅನುರಾಗದ ಮುಸ್ಸಂಜೆ ಎಂಬ ಸುಂದರ ಕಾರ್ಯಕ್ರಮವು ತಾರೀಕು 22–5–2022ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಇಲ್ಲಿ ಜರಗಿತು.

ಶ್ರೀ ಬಿ. ಎನ್. ಗೋಪಾಲಕೃಷ್ಣ ರಾವ್ ವಿರಚಿತ ಶ್ರೀಮತಿ ರೂಪಲಕ್ಷ್ಮಿ ರಾವ್ ನಿರ್ಮಾಣದ, ಶ್ರೀ ಶರತ್ ಬಿಳಿನೆಲೆ ಸಂಗೀತ ನೀಡಿ ನಿರ್ದೇಶಿಸಿದ, ಕಿರುತೆರೆ ಹಾಗೂ ಹಿರಿತೆರೆ ನಾಯಕಿನಟಿ ತನ್ವಿ ರಾವ್ ಹಾಗೂ ಶ್ರೀ ಸತೀಶ್ ಕಜೆಕಾರ್ ಅಭಿನಯಿಸಿದ, ಉದಯೋನ್ಮುಖ ಗಾಯಕಿ ತನುಶ್ರೀ ಅವರು ಹಾಡಿರುವ ಕವಿ ಎಂಬ ದೃಶ್ಯಕಾವ್ಯ ಬಿಡುಗಡೆ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಈ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಹಾಗೂ ನಿರ್ಮಾಪಕ ರಂಗಕರ್ಮಿ ಶ್ರೀ ವಿಜಯ ಕುಮಾರ್ ಕೊಡಿಯಾಲಬೈಲು, ಉದ್ಯಮಿ ಹಾಗೂ ಸುಬ್ರಹ್ಮಣ್ಯ ಸಭಾ ಇದರ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ವಿದುಷಿ ಶಾರದಾಮಣಿ ಶೇಖರ್, ಕದ್ರಿಯ ಶ್ರೀ ಶ್ರೀರಂಗ ಐತಾಳ್ ಇವರೆಲ್ಲ ಉಪಸ್ಥಿತರಿದ್ದು ಶುಭ ಹಾರೈಸಿದರು. ಸಾಧಕರಾದ ಬಂಗಾಡಿಯ ಡಾಕ್ಟರ್ ವಾಣಿ ಸುಗುಣ ಕುಮಾರ್, ಸಂಗೀತ ನಿರ್ದೇಶಕರಾದ ಶ್ರೀ ಜಗದೀಶ ಶಿವಪುರ, ಶ್ರೀಮತಿ ದೀಕ್ಷಾ ನವೀನ್, ಕಡಬದ ಶ್ರೀ ಶಶಿ ಗಿರಿವನ ಇವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ದೈಜಿವರ್ಲ್ಡ್‌ನ ಶ್ರೀ ಚೇತನ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಈ ಕಾರ್ಯಕ್ರಮದ ರೂವಾರಿಗಳಾದ ಶ್ರೀಮತಿ ರೂಪಲಕ್ಷ್ಮಿ ರಾವ್, ಶ್ರೀ ಎಂ. ಎಸ್. ಹರೀಶ್ ರಾವ್ ಮತ್ತು ಮಕ್ಕಳು ಹಾಗೂ ಮನೆಯವರು ಹಾಗೆಯೇ ಬಿ. ಜಿ. ಲೀಲಾವತಿ ರಾವ್ ಮತ್ತು ಮಕ್ಕಳು ಹಾಗೂ ಮನೆಯವರು ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಈ ಕವಿಯೆಂಬ ದೃಶ್ಯಕಾವ್ಯವನ್ನು ಅನುಷಾ ಅನುರಾಗ ಯುಟ್ಯೂಬ್ ಚಾನೆಲ್‌ನಲ್ಲಿ ವೀಕ್ಷಿಸಬಹುದು.

## ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ 'ಶಂಕರ ಜಯಂತಿ' ಆಚರಣೆ



ದಿನಾಂಕ 15–05–2022ರಂದು ಆದಿತ್ಯವಾರ ಮಧ್ಯಾಹ್ನ ಕಾರ್ಕಳದ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ 'ಶಂಕರ ಜಯಂತಿ' ಆಚರಣೆಯು ಮುನ್ಸಿಪಾಲ್ ಕೋರ್ಟ್‌ನ ಪಕ್ಕದಲ್ಲಿರುವ ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಮನೋಹರ ರಾವ್ ಇವರ ಮನೆಯಲ್ಲಿ ನೆರವೇರಿತು. ಡಾ। ಯಾಜಿ ನಿರಂಜನ ಭಟ್ ಇವರು ಸಕಲ ಪೂಜಾ ವಿಧಿ ವಿಧಾನಗಳೊಂದಿಗೆ ಶಂಕರ ಜಯಂತಿಯ ಆಚರಣೆಯನ್ನು ನೆರವೇರಿಸಿಕೊಟ್ಟರು. ಈ ಸಮಯದಲ್ಲಿ ಶಂಕರ ಪ್ರತಿಷ್ಠಾನದ ಮಹಿಳಾ ಭಜನಾ ತಂಡದವರು ಭಜನಾ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಶಂಕರ ಪ್ರತಿಷ್ಠಾನದ ಅಧ್ಯಕ್ಷರಾದ ಮಾನ್ಯ ಶ್ರೀ ಕೇಶವ ರಾವ್, ಮಹಿಳಾ ಅಧ್ಯಕ್ಷೆ ಶ್ರೀಮತಿ ವಿದ್ಯಾವತಿ ರಾವ್ ಬೈಲೂರು ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಹಾಜರಿದ್ದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು. ಪೂಜೆಯ ಬಳಿಕ ಡಾ. ಯಾಜಿ ನಿರಂಜನ ಭಟ್ ಇವರು ಶಂಕರ ಜಯಂತಿಯ ಆಚರಣೆಯ ಬಗ್ಗೆ ಮಾತನಾಡಿದರು. ಅಂದಿನ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಉಪಾಹಾರದ ವ್ಯವಸ್ಥೆಯನ್ನು ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಮನೋಹರ ರಾವ್ ಹಾಗೂ ಅವರ ಮನೆಯವರು ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಹರಿಶ್ಚಂದ್ರ ರಾವ್ ಕರ್ವಾಲು ಇವರು ಆಗಮಿಸಿ ಧನ್ಯವಾದ ನೀಡಿದರು.

### ವಿಳಾಸ ಬದಲಾವಣೆ

ಹೊಸ ವಿಳಾಸ : **ಕೆ. ಆರ್. ಉಪಾಧ್ಯಾಯ**
**ಶ್ರೀ ಸುಬ್ರಹ್ಮಣ್ಯ ಸಭಾ ಹಾಸ್ಟೆಲ್, ಕೊಡಿಯಾಲ್‌ಬೈಲ್**
**ಮಂಗಳೂರು - 575 003**

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Muralidhara Rao Adyapadi
Proprietor
Mob : 94480 27259
99803 16434
**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

Prop.: *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ಅಪಾರ ಕೀರ್ತಿ ಗಳಿಸಿ




ಶ್ರೀ ಪ್ರದೀಪ್ ಸಿ. ಶಾನುಭೋಗ್ ಮತ್ತು ಶ್ರೀಮತಿ ರಾಜೇಶ್ವರಿಯವರ ಸುಪುತ್ರಿ **ಕು। ವೈಷ್ಣವಿ ಪಿ. ಶಾನುಭೋಗ್** ಇವರು ಮಂಗಳೂರು ವಿಶ್ವವಿದ್ಯಾನಿಲಯದ ಬಿ. ಕಾಂ. ಪದವಿ ಪರೀಕ್ಷೆಯಲ್ಲಿ 7ನೇ ರ್‍ಯಾಂಕ್ ಗಳಿಸಿದ್ದಾಳೆ. ಈಕೆ ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ನಾರಾವಿ ಶ್ರೀ ರವಿಶಂಕರ ರಾವ್ ಮತ್ತು ಶ್ರೀಮತಿ ಪೂರ್ಣಿಮಾರವರ ಪುತ್ರ **ಚಿ। ಶ್ರೀವರ್ಧನ್** ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ 586/600 (ಶೇ 97.6) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕೊಡಿಯಾಲಬೈಲ್ ಎಕ್ಸ್ಪರ್ಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ.

❖ ❖ ❖



ಪೆರಾಡಿ ಶ್ರೀ ಉದಯ ಭಟ್ ಹಾಗೂ ಶ್ರೀಮತಿ ಸುಮಿತ್ರಾ ಇವರ ಸುಪುತ್ರ **ಚಿ। ಸಿದ್ಧಾರ್ಥ್ ಯು. ರಾವ್**‌ರವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 93% ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

❖ ❖ ❖



ಶಿರ್ತಾಡಿ ಶ್ರೀ ಶಶಿಕಾಂತ್ ರಾವ್ ಮತ್ತು ಶ್ರೀಮತಿ ಚೇತನಾರವರ ಸುಪುತ್ರಿ **ಕು। ಸಂಸ್ಕೃತಿ ಎಸ್.** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 575/600 (ಶೇ. 95.8) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ಶ್ರೀ ಗಿರೀಶ್ ರಾವ್ ಎಂ. ಮತ್ತು ಶ್ರೀಮತಿ ಮೂಕಾಂಬಿಕಾ ಎಂ. ಇವರ ಪುತ್ರ **ಚಿ। ಅಶ್ವಥ್ ನಾರಾಯಣ ರಾವ್ ಎಂ.** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 530/625 (ಶೇ. 84.8) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವನು ಕುಳಾಯಿಯ ಅಂಕುರ್ ಶಾಲೆಯ ವಿದ್ಯಾರ್ಥಿ.

❖ ❖ ❖



ಡಾ। ಸಂತೋಷ್ ಅಡೂರ್ ಮತ್ತು ಡಾ। ಗೀತಾರವರ ಸುಪುತ್ರ **ಚಿ। ಸಾತ್ವಿಕ್ ರಾವ್** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 584/600 (ಶೇ. 96.3) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಮಂಗಳೂರಿನ ವಳಚ್ಚಿಲ್‌ನ ಎಕ್ಸ್‌ಪರ್ಟ್ ಕಾಲೇಜಿಗೆ ಪ್ರಥಮ ರ್‍ಯಾಂಕ್ ಬಂದಿದ್ದು, ಕೆವಿಪಿವೈ ಪರೀಕ್ಷೆಯಲ್ಲಿ ದೇಶಕ್ಕೆ 552ನೇ ರ್‍ಯಾಂಕ್ ಪಡೆದಿದ್ದಾನೆ.

❖ ❖ ❖



ಶ್ರೀ ನವೀನ್ ಹೆಬ್ಬಾರ್ ಮತ್ತು ಶ್ರೀಮತಿ ಮಮತಾರವರ ಸುಪುತ್ರ **ಚಿ। ಶ್ರೀಕೃಷ್ಣ** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 572/600 (ಶೇ. 95.3) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿ.

❖ ❖ ❖



ಅಂಬೂರಿ ಶ್ರೀ ಜನಾರ್ದನ ರಾವ್ ಹಾಗೂ ಶ್ರೀಮತಿ ಪ್ರತಿಮಾ ಇವರ ಸುಪುತ್ರ **ಚಿ। ಜ್ಞಾನೇಶ್ ರಾವ್** ಈ ಬಾರಿಯ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 579/600 (ಶೇ. 96.5) ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ.

❖ ❖ ❖



ಶ್ರೀ ಯೋಗೀಶ್ ಶಿವರಾಮ್ ಶಾಸ್ತ್ರೀ ಮತ್ತು ಶ್ರೀಮತಿ ಸುರೇಖಾರವರ ಸುಪುತ್ರಿ **ಕು। ವೈಷ್ಣವಿ** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 543/600 (ಶೇ. 90.5) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಮಂಗಳೂರಿನ ಕೆನರಾ ಪಿಯು ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ಶ್ರೀ ಚಂದ್ರಶೇಖರ ಸಿ. ಮತ್ತು ಶ್ರೀಮತಿ ಜಯಲಕ್ಷ್ಮಿಯವರ ಸುಪುತ್ರಿ **ಕು। ಸ್ಮಿತಾ ಸಿ.** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 578/600 (ಶೇ. 96.3) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ವಿದ್ಯಾರ್ಥಿನಿ.



ಚೊಕ್ಕಾಡಿ ಶ್ರೀ ವಾದಿರಾಜ ರಾವ್ ಮತ್ತು ಶ್ರೀಮತಿ ಸುಕನ್ಯಾ ರಾವ್‌ರವರ ಸುಪುತ್ರಿ **ಕು। ವೈಷ್ಣವಿ ರಾವ್** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 566/600 (ಶೇ. 94.3) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಪುತ್ತೂರಿನ ವಿವೇಕಾನಂದ ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ಶ್ರೀ ಕೃಷ್ಣರಾಜ್ ಭಟ್ ಮತ್ತು ಶ್ರೀಮತಿ ಮಮತಾರವರ ಸುಪುತ್ರಿ **ಕು। ಶರಣ್ಯ** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 566/600 (ಶೇ. 94) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



**ಕುಮಾರಿ ಸಾಕ್ಷಿ ಜೆ.** ದ್ವಿತೀಯ ಪಿಯುಸಿ ಬೋರ್ಡ್ ಪರೀಕ್ಷೆಯಲ್ಲಿ 568/600 (ಶೇ. 94.6) ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣಳಾಗಿದ್ದಾಳೆ. ಈಕೆ ಬೆಂಗಳೂರಿನಲ್ಲಿ ನೆಲೆಸಿರುವ ಪುತ್ತೂರಿನ ತಾಳೆಪಾಡಿ ಶ್ರೀ ಜಗದೀಶ್ ಮತ್ತು ಶ್ರೀಮತಿ ಸುನಿತಾ ದಂಪತಿಗಳ ಸುಪುತ್ರಿ ಹಾಗೂ ಬೆಂಗಳೂರಿನ ಹುಳಿಮಾವು ನಾರಾಯಣ ಪಿಯು ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



**ಕುಮಾರ್ ಶ್ರೇಯಸ್ ಜೆ.** ದ್ವಿತೀಯ ಪಿಯುಸಿ ಬೋರ್ಡ್ ಪರೀಕ್ಷೆಯಲ್ಲಿ 552/600 (ಶೇ. 92) ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣನಾಗಿದ್ದಾನೆ. ಇವನು ಬೆಂಗಳೂರಿನಲ್ಲಿ ನೆಲೆಸಿರುವ ಪುತ್ತೂರಿನ ತಾಳೆಪಾಡಿ ಶ್ರೀ ಜಗದೀಶ್ ಮತ್ತು ಶ್ರೀಮತಿ ಸುನಿತಾ ದಂಪತಿಗಳ ಸುಪುತ್ರ ಹಾಗೂ ಬೆಂಗಳೂರಿನ ಹುಳಿಮಾವು ನಾರಾಯಣ ಪಿಯು ಕಾಲೇಜಿನ ವಿದ್ಯಾರ್ಥಿ.

❖ ❖ ❖



ಶ್ರೀ ಗಂಗಾಧರ ಶರ್ಮಾ ಮತ್ತು ಶ್ರೀಮತಿ ಜ್ಯೋತಿ ಶರ್ಮಾರ ಸುಪುತ್ರಿ **ಕು। ಭಾರ್ಗವಿ ಶರ್ಮಾ** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 563/600 (ಶೇ. 93.8) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಗುರುವಾಯನಕೆರೆ ಎಕ್ಸೆಲ್ ಪಿಯು ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ಶ್ರೀ ರವಿಕಿರಣ್ ಕೊಯಿಲ ಮತ್ತು ಶ್ರೀಮತಿ ಪದ್ಮಿನಿ ಇವರ ಪುತ್ರಿ **ಕು। ಸಿಂಚನ ಕೆ.** ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗ (ಪಿಸಿಎಂಸಿ) 94.5% (567) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ ಇವಳು ಕಡಬ ತಾಲೂಕು ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ಬೆಳ್ತಂಗಡಿ ಕಿಲ್ಲೂರಿನ ಶ್ರೀ ಉಮೇಶ್ ರಾವ್ ಮತ್ತು ಶ್ರೀಮತಿ ನಾಗರತ್ನರವರ ಸುಪುತ್ರ **ಚಿ। ಶಂಕರ ನಾರಾಯಣ ರಾವ್** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 544/600 (ಶೇ. 90.6%) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಗುರುವಾಯನಕೆರೆ ಎಕ್ಸಲ್ ಪಿಯು ಕಾಲೇಜಿನ ವಿದ್ಯಾರ್ಥಿ.

❖ ❖ ❖



ಶ್ರೀ ಪ್ರಕಾಶ್ ರಾವ್ ಮತ್ತು ಶ್ರೀಮತಿ ಸುಗುಣಾ ರಾವ್‌ರವರ ಸುಪುತ್ರಿ **ಕು। ಪೃಥ್ವಿ ರಾವ್** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 573/600 (ಶೇ. 95.5) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಗುರುವಾಯನಕೆರೆ ಎಕ್ಸೆಲ್ ಕಾಲೇಜಿನ ವಿದ್ಯಾರ್ಥಿನಿ.

❖ ❖ ❖



ಶ್ರೀ ಶ್ರೀಕಾಂತ್ ರಾವ್ ಮತ್ತು ಶ್ರೀಮತಿ ಸುಮಂಗಲಾ ರಾವ್‌ರವರ ಸುಪುತ್ರ **ಚಿ। ಸುಮಂತ್ ರಾವ್** ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ 540/600 (ಶೇ. 90) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕಟೀಲಿನ ಎಸ್‌ಡಿಪಿಟಿ ಕಾಲೇಜಿನ ವಿದ್ಯಾರ್ಥಿ.

# ಅಪಾರ ಕೀರ್ತಿ ಗಳಿಸಿ



ಶ್ರೀ ನಿತಿನ್ ಕುಮಾರ್ ಮತ್ತು ಶ್ರೀಮತಿ ಅಕ್ಷತಾರವರ ಸುಪುತ್ರಿ **ಕು| ಅವನಿ** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625/625 (ಶೇ. 100) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೆಂಗಳೂರಿನ ಹೋಲಿ ಚೈಲ್ಡ್ ಹೈಸ್ಕೂಲ್‌ನ ವಿದ್ಯಾರ್ಥಿನಿ. ಈಕೆ ಸೀನಿಯರ್ ಗ್ರೇಡ್ ಭರತನಾಟ್ಯ ಪರೀಕ್ಷೆಯಲ್ಲೂ ಶೇ. 96 ಅಂಕ ಗಳಿಸಿದ ಪ್ರತಿಭಾವಂತೆ.

❖ ❖ ❖



ಶ್ರೀ ನರೇಂದ್ರ ಎಸ್. ರಾವ್ ಮತ್ತು ಶ್ರೀಮತಿ ಜ್ಯೋತಿ ಎನ್. ರಾವ್‌ರವರ ಸುಪುತ್ರಿ **ಕು| ಪ್ರಜ್ಞಾ ಎನ್. ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 624/625 (ಶೇ. 99.8) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೆಂಗಳೂರಿನ ವಿಜಯನಗರ ಕಾರ್ಡಿಯಲ್ ಹೈಸ್ಕೂಲ್‌ನ ವಿದ್ಯಾರ್ಥಿನಿ.

❖ ❖ ❖



ಶ್ರೀ ಕೆ. ರಮೇಶ್ ರಾವ್ ಮತ್ತು ಶ್ರೀಮತಿ ಆಶಾರವರ ಸುಪುತ್ರ **ಚಿ| ಕೆ. ರವೀಶ್ ರಾವ್** ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 617/625 (ಶೇ. 98.7) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಉಡುಪಿಯ ಶ್ರೀ ಅನಂತೇಶ್ವರ ಹೈಸ್ಕೂಲ್ ವಿದ್ಯಾರ್ಥಿ.

❖ ❖ ❖



ಶ್ರೀ ರಾಧಾಕೃಷ್ಣ ಹೆಬ್ಬಾರ್ ಮತ್ತು ಶ್ರೀಮತಿ ಶರಣ್ಯರವರ ಸುಪುತ್ರಿ **ಕು| ಅಭಿಜ್ಞಾ** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 590/625 (ಶೇ. 94.4) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಮೂಲ್ಕಿ ನಾರಾಯಣ ಗುರು ಹೈಸ್ಕೂಲ್‌ನ ವಿದ್ಯಾರ್ಥಿನಿ.

❖ ❖ ❖



ಶ್ರೀ ರಾಮಕೃಷ್ಣ ರಾವ್ ಮತ್ತು ಶ್ರೀಮತಿ ವೀಣಾ ರಾವ್‌ರವರ ಸುಪುತ್ರ **ಚಿ| ಕಾರ್ತಿಕ್ ಕುಮಾರ್ ಪಿ.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 585/625 (ಶೇ. 93.6) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಬೆಳ್ಳಾರೆಯ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿ.

❖ ❖ ❖



ದಿ. ಕಿಗ್ಗ ಅರುಣ್ ರಾವ್ ಮತ್ತು ಶ್ರೀಮತಿ ಮಾನಸರವರ ಸುಪುತ್ರ **ಚಿ| ಹರ್ಷಿತ್ ಎ.** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 590/625 (ಶೇ. 94.4) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಮಂಗಳೂರು ಉರ್ವ ಕೆನರಾ ಶಾಲೆಯ ವಿದ್ಯಾರ್ಥಿ.

❖ ❖ ❖



ಶ್ರೀ ವಿಜಯಚಂದ್ರ ರಾವ್ ಮತ್ತು ಶ್ರೀಮತಿ ಶುಭ ರಾವ್ ಇವರ ಸುಪುತ್ರ **ಚಿ| ವಲ್ಲಭ್ ರಾವ್** ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 590/625 (ಶೇ. 94.4) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.


**ರಾಮಾ ಅಟೋಮೊಬೈಲ್ಸ್**




ಮಾರುತಿ ವಾಹನ ತಜ್ಞರು

**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**

**ಕೆ. ಲಕ್ಷ್ಮೀನಾರಾಯಣ ಶರ್ಮ**
ಅತಿಕಾರಬೈಲು, ವಗ್ಗ

✆ : 9448043969
8861497325

**ಶಿವಗಿರಿ ಎಂಟರ್‌ಪ್ರೈಸಸ್**

**SHIVAGIRI ENTERPRISES**



ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**

'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**

**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

**PREETHIKA AUTOMOBILES**

✆
2493633
9845851573

*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶಕೃಪಾ, ಪೃಥ್ವೀ ಲೇಔಟ್
**ಕೂಳೂರು, ಮಂಗಳೂರು - 575 013**



# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಮಂಗಳೂರು ಇದರ ಮೂಡಬಿದ್ರೆ ಶಾಖೆ ಉದ್ಘಾಟನಾ ಸಮಾರಂಭ



ಮಂಗಳೂರಿನ ಬಿಜೈ ರಸ್ತೆಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಧಾನ ಕಚೇರಿ ಹೊಂದಿರುವ, ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.) ಇದರ ಮೂಡಬಿದ್ರೆ ಶಾಖೆಯು 'ಮೂಡಬಿದ್ರೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬಳಿಯಿರುವ ವಾಸುದೇವ ಕಾಂಪ್ಲೆಕ್ಸ್‌ನ ಒಂದನೇ ಮಹಡಿ'ಯಲ್ಲಿ ದಿನಾಂಕ 31-05-2022ನೇ ಮಂಗಳವಾರದಂದು ಉದ್ಘಾಟನೆಗೊಂಡಿತು.

ಶಾಖೆಯನ್ನು HPCLನ ನಿವೃತ್ತ ಮಹಾಪ್ರಬಂಧಕರಾದ ಶ್ರೀ ಶೈಲೇಶ್ ಆರ್. ರಾವ್ ಇವರು ಉದ್ಘಾಟಿಸಿದರು. ಶ್ರೀ ಸೀತಾರಾಮಚಂದ್ರ ದೇವಸ್ಥಾನ, ಅಶ್ವತ್ಥಪುರ, ಇದರ ಆಡಳಿತ ಮೊಕ್ತೇಸರರಾದ ಶ್ರೀ ರಘುನಾಥ ಎಲ್.ವಿ. ಇವರು ದೀಪ ಬೆಳಗಿಸಿ ಶುಭ ಹಾರೈಸಿದರು. ಕರ್ನಾಟಕ ಬ್ಯಾಂಕ್ ಲಿ., ಮಂಗಳೂರು ಇದರ ಮಹಾಪ್ರಬಂಧಕರಾದ ಶ್ರೀ ಬಿ. ಚಂದ್ರಶೇಖರ ರಾವ್ ಇವರು ಭದ್ರತಾ ಕೊಠಡಿಯನ್ನು ಉದ್ಘಾಟಿಸಿ, ಶಾಖೆಯು ಇನ್ನಷ್ಟು ಉತ್ತಮ ಗ್ರಾಹಕರಿಗೆ ಸೇವೆ ನೀಡುವಂತಾಗಲಿ ಎಂದು ಶುಭ ಹಾರೈಸಿದರು. ಪದ್ಮಶ್ರೀ ಏಜೆನ್ಸಿ, ಮೂಡಬಿದ್ರೆ ಇದರ ಆಡಳಿತ ಪಾಲುದಾರರಾದ ಶ್ರೀ ಅಭಿಜಿತ್ ಯಂ. ಇವರು ಪ್ರಥಮ ಠೇವಣಿ ಪತ್ರ ಹಸ್ತಾಂತರಿಸುವ ಮೂಲಕ ಶಾಖೆಯ ವ್ಯವಹಾರಕ್ಕೆ ಚಾಲನೆ ನೀಡಿದರು. ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು ಇದರ ಅಧ್ಯಕ್ಷರೂ ಮತ್ತು ಶಾಖೆಯ ಸಲಹಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಎಂ. ದೇವಾನಂದ ಭಟ್ ಬೆಳುವಾಯಿ ಇವರು ಮುಖ್ಯ ಅತಿಥಿಯಾಗಿ ಸಂಸ್ಥೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಮಂಗಳೂರು ಇದರ ಅಧ್ಯಕ್ಷರಾದ ಶ್ರೀ ಕರುಣ್ ರಾವ್ ಬೆಳ್ಳೆಯವರು ಸಭಾಧ್ಯಕ್ಷತೆ ವಹಿಸಿ, ಸಂಘದ ಬೆಳವಣಿಗೆಗೆ ಮೂಡಬಿದ್ರೆ ಪ್ರದೇಶದ ಎಲ್ಲರ ಸಹಕಾರವನ್ನು ಕೋರಿದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ನಟರಾಜ ಎನ್. ಎಸ್., ಆಡಳಿತ ಮಂಡಳಿಯ ನಿರ್ದೇಶಕರು, ಶಾಖಾ ಸಲಹಾ ಸಮಿತಿ ಸದಸ್ಯರುಗಳು ಹಾಗೂ ಮೂಡಬಿದ್ರೆಯ ಧನಲಕ್ಷ್ಮೀ ಕ್ಯಾಶ್ವದ ಮ್ಹಾಲಕರಾದ ಶ್ರೀ ಶ್ರೀಪತಿ ಭಟ್ ಉಪಸ್ಥಿತರಿದ್ದರು. ಶ್ರೀ ರಾಯೀ ರಾಜಕುಮಾರ್ ರಾವ್ ಪ್ರಾಸ್ತಾವಿಕ ಭಾಷಣದೊಂದಿಗೆ ಸ್ವಾಗತಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಸಾಯಿಪ್ರಸಾದ್ ಎಂ. ಇವರು ಧನ್ಯವಾದಗೈದರು. ನಿವೃತ್ತ ಶಿಕ್ಷಕರಾದ ಶ್ರೀ ಬಿ. ಜಯರಾಮ್ ರಾವ್ ಇವರು ಕಾರ್ಯಕ್ರಮ ನಿರೂಪಿಸಿದರು.

ಚಿತ್ರ : ಶೋಭಾ ಡಿಜಿಟಲ್ಸ್, ಬೆಳುವಾಯಿ






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


***Publisher :*** *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
***Editor :*** *Sri M. S. Raghunath Rao, Darbe, Puttur* ***Printed at :*** *Rajesh Power Press, Darbe - 574 202, Puttur, D. K.*